**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.1.**

ಸಂಖ್ಯೆ. ಸಿ4(4) ಪ್ರೌ.ಶಾ. ಪ್ರೌ.ಶಿ. ಸ.ಪ್ರಾ/ಪ್ರೌ.ಶಾ.ಆಸ್ತಿ ನೋಂದಣಿ.57/19-20. ದಿನಾಂಕ. 13/08/2019.

**ಸುತ್ತೋಲೆ**

ವಿಷಯ: ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿನ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಆಸ್ತಿಯನ್ನು ಶಾಲೆಗಳ ಹೆಸರಲ್ಲಿ ನೊಂದಾಯಿಸುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಸಭಾ ಸೂಚನಾ ಪತ್ರ ಸಂಖ್ಯೆ. ಇಡಿ. 80 ಪಿಜಿಸಿ 2019 ದಿನಾಂಕ. 22/07/2019.

2) ಶ್ರೀ. ಟಿ.ಜಿ. ನರಸಿಂಹಮೂರ್ತಿ, ಜಿಲ್ಲಾ ಪಂಚಾಯತ್ ಸದಸ್ಯರು ಹಾಗು ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ ಅಧ್ಯಕ್ಷರು, ಬೆಂ. ನಗರ ಜಿಲ್ಲಾ ಪಂಚಾಯಿತಿ, ಬೆಂ. ನಗರ ಇವರ ಮನವಿ ದಿನಾಂಕ. 14/6/2019.

3) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯ ಸಭಾ ನಡವಳಿ ದಿನಾಂಕ 30/7/2019.

4) ಈ ಕಛೇರಿ ಜ್ಞಾಪನ ಸಮ ಸಂಖ್ಯೆ. ದಿನಾಂಕ. 13/8/2019.

-----

ಬೆಂಗಳೂರು ನಗರ ಜಿಲ್ಲೆಯಲ್ಲಿ ಒಟ್ಟು 1,522 ಸರ್ಕಾರಿ ಶಾಲೆಗಳಿದ್ದು, ಅದರಲ್ಲಿ ಸುಮಾರು 600 ಕ್ಕೂ ಹೆಚ್ಚು ಶಾಲೆಗಳ ಆಸ್ತಿಯು ಶಾಲೆಯ ಹೆಸರಿನಲ್ಲಿ ಇರುವುದಿಲ್ಲ. ಶಿಕ್ಷಣ ಇಲಾಖೆಗೆ ಸಂಬಂಧಪಟ್ಟ ಅಧಿಕಾರಿಗಳು ಇದರ ಬಗ್ಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

600 ಶಾಲೆಗಳ ಪರವಾಗಿ ಬೆಂಗಳೂರು ಉತ್ತರ ಮತ್ತು ದಕ್ಷಿಣ ಉಪವಿಭಾಗಾಧಿಕಾರಿಗಳು ಇವರಲ್ಲಿ ಮೊಕದ್ದಮೆಯನ್ನು ಶ್ರೀ. ಜಿ.ಟಿ. ನರಸಿಂಹಮೂರ್ತಿ ಇವರು ಖಾಸಗಿಯಾಗಿ ಸಲ್ಲಿಸಿದ್ದು, ಇವರು ಸರ್ಕಾರಿ ಶಾಲೆಗಳ ಮೇಲೆ ಇಟ್ಟಿರುವ ಕಾಳಜಿಯನ್ನು ಸ್ಮರಿಸಿ, ಮೊಕದ್ದಮೆಯನ್ನು ತ್ವರಿತವಾಗಿ ವಿಲೇವಾರಿ ಮಾಡಿ ಆಸ್ತಿಯನ್ನು ಶಾಲೆಗಳ ಹೆಸರಿನಲ್ಲಿ ನೋಂದಣಿ ಮಾಡಲು ಅಧಿಕಾರಿಗಳಿಗೆ ಸೂಚಿಸಬೇಕೆಂದು ಉಪ ವಿಭಾಗಾಧಿಕಾರಿಗಳು ಆದೇಶ ನೀಡಿರುತ್ತಾರೆ ಎಂದು ತಿಳಿಸಿರುತ್ತಾರೆ. ಶ್ರೀಯುತರು ಶಾಲೆಗಳ ಪಟ್ಟಿ ಹಾಗು ಆಸ್ತಿಯ ವಿವರಗಳೊಂದಿಗೆ ಮಾನ್ಯ ಮುಖ್ಯ ಮಂತ್ರಿಗಳಿಗೆ ಉಲ್ಲೇಖ-2 ರ ಶಾಲೆಯ ಹೆಸರಿಗೆ ನೋಂದಣಿ ಮಾಡಲು ಕೋರಿರುತ್ತಾರೆ.

ದಿನಾಂಕ. 30/7/2019 ರಂದು ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರ ಅಧ್ಯಕ್ಷತೆಯಲ್ಲಿ ಸಭೆ ನಡೆದಿದ್ದು, ಸದರಿ ಸಭೆಯಲ್ಲಿ ಶ್ರೀ. ಟಿ.ಜಿ. ನರಸಿಂಹಮೂರ್ತಿ ರವರು ಸಲ್ಲಿಸಿರುವ ಮನವಿಯನ್ನು ಪರಿಶೀಲಿಸಿ ಸುಮಾರು 600 ಕ್ಕೂ ಹೆಚ್ಚು ಶಾಲೆಗಳ ಶಾಲಾ ಆಸ್ತಿಯನ್ನು ನಿಯಮಾನುಸಾರ ಶಾಲೆಯ ಹೆಸರಿನಲ್ಲಿ ನೋಂದಣಿ ಮಾಡಿಸುವ ಬಗ್ಗೆ ಕ್ರಮ ಕೈಗೊಳ್ಳಲು ತೀರ್ಮಾನಿಸಿರುತ್ತಾರೆ. ಆದುದರಿಂದ ಬೆಂಗಳೂರು ನಗರಕ್ಕೆ ಸಂಬಂಧಿಸಿದಂತೆ ಶಾಲೆಗಳ ಪಟ್ಟಿಯನ್ನು ಉಲ್ಲೇಖ-4 ಜ್ಞಾಪನದೊಂದಿಗೆ ಲಗತ್ತಿಸಿ ಕಳುಹಿಸಿ ಬೆಂಗಳೂರು ನಗರ ವ್ಯಾಪ್ತಿಯ ಶಾಲೆಗಳ ಆಸ್ತಿಯನ್ನು ನಿಯಮಾನುಸಾರ ಸಂಬಂಧಿಸಿದ ಆಸ್ತಿಯನ್ನು ದಿನಾಂಕ. 31/8/2019 ರೊಳಗೆ ನೋಂದಣಿ ಮಾಡಿ ಈ ಕಛೇರಿಗೆ ವರದಿ ಮಾಡಲು ತಿಳಿಸಲಾಗಿರುತ್ತದೆ.

ಉಳಿದಂತೆ ಇತರೆ ಜಿಲ್ಲೆಗಳ ಉಪನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ರವರು ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪ್ರಾಥಮಿ ಮತ್ತು ಪ್ರೌಢ ಶಾಲೆಗಳ ಆಸ್ತಿಗಳನ್ನು ಆಯಾ ಶಾಲೆಯ ಹೆಸರಿಗೆ ನಿಯಮಾನುಸಾರ ಈ ಸುತ್ತೋಲೆ ತಲುಪಿದ ಕೂಡಲೇ ಕ್ರಮ ಜರುಗಿಸಿ, ಒಂದು ತಿಂಗಳೊಳಗಾಗಿ ನೋಂದಣಿ ಪರಕ್ರಿಯೆಗಳನ್ನು ಅಂತಿಮಗೊಳಿಸಿ ಈ ಕಛೇರಿಗೆ ವರದಿ ಮಾಡಲು ತಿಳಿಸಿದೆ.

ನಿರ್ದೇಶಕರು (ಪ್ರೌಢ ಶಿಕ್ಷಣ)
ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.1.

ಗೆ

ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ರವರ ಅಗತ್ಯ ಕ್ರಮಕ್ಕಾಗಿ.